ಶ್ರೀ ಹೆಚ್.ಎಸ್. ಪ್ರಕಾಶ್: ಸರ್ವೇ ನಂಬರ್, ಗ್ರಾಮ ಎಲ್ಲಾ ಕೊಟ್ಟು ಆಗಿದೆ.

ಅಧ್ಯಕ್ಷರು: ನಿಮ್ಮ ನೋಟಿಸ್‌ನಲ್ಲಿ ಕೊಟ್ಟಿದ್ದೀರಾ?

ಶ್ರೀ ಹೆಚ್.ಎಸ್. ಪ್ರಕಾಶ್: ಕೊಟ್ಟಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ: ಗಮನಸೆಳೆಯುವ ಸೂಚನೆ 19ರಲ್ಲಿ ಇದೆ.

ಅಧ್ಯಕ್ಷರು: ನೀವು ಕೊಟ್ಟಿರುವುದರಲ್ಲಿ ಸರ್ವೇ ನಂಬರ್, ಗ್ರಾಮವಿಲ್ಲ. ಕಳುಹಿಸಿಕೊಡಿ, ಅಷ್ಟು ಮಾಡಿ.

ವಿಷಯ: ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ 2014–15ನೇ ಸಾಲಿನ ಸಣ್ಣ ನೀರಾವರಿ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಗುರುತಿಸುವಲ್ಲಿ ಆಗಿರುವ ಲೋಪದೋಷಗಳನ್ನು ಸರಿಪಡಿಸುವ ಬಗ್ಗೆ.

ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ (ಸವದತ್ತಿ): ಮಾನ್ಯ ಅಧ್ಯಕ್ಷರೆ, 2014–15ನೇ ಸಾಲಿನಲ್ಲಿ ಸಣ್ಣ ನೀರಾವರಿ ಯೋಜನೆಯಡಿಯಲ್ಲಿ ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ವಿಶೇಷ ಘಟಕ ಯೋಜನೆಯಡಿ ಹಾಗೂ ಗಿರಿಜನ ಉಪ ಯೋಜನೆಯಡಿ ಫಲಾನುಭವಿಗಳನ್ನು ಗುರುತಿಸಿ ಮಂಜೂರಾತಿಯಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಆದರೆ ಈ ಸಾಲಿನ ಯೋಜನೆಯಡಿಯಲ್ಲಿ ಹೊಸ ಕಾಮಗಾರಿಗಳ ಅವೆಂಡಿಕ್ಸ–ಇ ಗಳನ್ನು ಪರಿಶೀಲಿಸಲಾಗಿ ಪ್ರಸ್ತಾವನೆ ಸಲ್ಲಿಸಿದ್ದ ಫಲಾನುಭವಿಗಳ ಬದಲಾಗಿ ಬೇರೆ ಫಲಾನುಭವಿಗಳು ಆಯ್ಕೆಯಾಗಿರುವುದು ಕಂಡುಬಂದಿದ್ದು, ಈ ಲೋಪದೋಷಗಳನ್ನು ಸರಿಪಡಿಸುವ ಹಾಗೂ ಫಲಾನುಭವಿಗಳ ಆಯ್ಕೆಗೆ ಸರ್ಕಾರ ನಿಗದಿಪಡಿಸಿರುವ ಮಾನದಂಡಗಳ ಬಗ್ಗೆ ಮಾನ್ಯ ಸಣ್ಣ ನೀರಾವರಿ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಶಿವರಾಜ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ಕಾಮಗಾರಿಗಳನ್ನು ಕೈಗೊಳ್ಳಲು ಹಲವಾರು ಪ್ರಸ್ತಾವನೆಗಳು ಸ್ವೀಕೃತವಾಗುವುದು. ಅದರೆ ಅನುದಾನದ ಲಭ್ಯತೆಯನ್ನಾಧರಿಸಿ ಹಾಗೂ ಆದ್ಯತೆಯ ಮೇಲೆ ಕಾಮಗಾರಿಗಳನ್ನು ಆಯ್ಕೆ ಮಾಡಿ ಕ್ರಿಯಾ ಯೋಜನೆಯಲ್ಲಿ ಸೇರಿಸಿ ಅನುಮೋದನೆ ಪಡೆಯಲಾಗುವುದು. ಆದ್ದರಿಂದ ಈ ಪ್ರಕ್ರಿಯೆಯಲ್ಲಿ ಸ್ವೀಕೃತವಾದ ಎಲ್ಲಾ ಕಾಮಗಾರಿಗಳನ್ನು ಪರಿಗಣಿಸಲು ಅವಕಾಶ ಇರುವುದಿಲ್ಲ.

2014–15ನೇ ಸಾಲಿನ ಸಣ್ಣ ನೀರಾವರಿ ಇಲಾಖೆಗೆ ವಿಶೇಷ ಘಟಕ ಯೋಜನೆ ಘಟಕ ಹಾಗೂ ಗಿರಿಜನ ಉಪಯೋಜನೆ ಶೀರ್ಷಿಕೆಗಳಡಿ ಒದಗಿಸಲಾಗಿದ್ದ ಅನುದಾನದ ಎದುರಾಗಿ ಸವದತ್ತಿ ಎಲ್ಲಮ್ಮ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ವಿಶೇಷ ಘಟಕ ಯೋಜನೆಯಡಿ ಕ್ರಮಸಂಖ್ಯೆ: 102 ರಿಂದ 118 ರವರೆಗಿನ ಕಾಮಗಾರಿಗಳು ಹಾಗೂ ಗಿರಿಜನ ಉಪಯೋಜನೆಗೆ ಸಂಬಂಧಿಸಿದಂತೆ ಕ್ರಮಸಂಖ್ಯೆ: 81 ರಿಂದ 85 ರವರೆಗಿನ ಕಾಮಗಾರಿಗಳನ್ನು ಅನುಮೋದಿಸಲಾಗಿದೆ.

2014–15ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಗಳ ಫಲಾನುಭವಿಗಳನ್ನು ಗುರುತಿಸಲು ಸಣ್ಣ ನೀರಾವರಿ ಇಲಾಖೆಯಿಂದ ದಿನಾಂಕ: 03–06–2015ರಲ್ಲಿ ಮಾರ್ಗಸೂಚಿಗಳನ್ನು ನೀಡಲಾಗಿದೆ. ಮಾರ್ಗಸೂಚಿ ಪ್ರಕಾರ ತಾಲ್ಲೂಕು ಮಟ್ಟದಲ್ಲಿ ಫಲಾನುಭವಿಗಳನ್ನು ಗುರುತಿಸಲು ಸಮಿತಿ ರಚಿಸಲು ತಿಳಿಸಲು ತಿಳಿಸಿದ್ದು, ಸಮಿತಿಗೆ ಆಯಾ ವಿಧಾನಸಭೆ ಕ್ಷೇತ್ರದ ಶಾಸಕರು ಅಧ್ಯಕ್ಷರಾಗಿರುತ್ತಾರೆ. ಸಂಬಂಧಿಸಿದ ಸಣ್ಣ ನೀರಾವರಿ ಇಲಾಖೆ, ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು ಸದಸ್ಯರಾಗಿರುತ್ತಾರೆ, ಹಾಗೂ ತಾಲ್ಲೂಕ್ ಸಮಾಜ ಕಲ್ಯಾಣ ಅಧಿಕಾರಿಯವರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಈ ಸಮಿತಿಯಲ್ಲಿ

ಆಯ್ಕೆಯಾದ ಫಲಾನುಭವಿಗಳ ಕಾಮಗಾರಿಗಳನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ ಕೈಕೊಳ್ಳಲಾಗುವುದು.

ಶ್ರೀ ಆನಂದ ವಿಶ್ವನಾಥ ಮಾಮನಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಇದು ಶಾಸಕರ ಹಕ್ಕು, SCP & TSP ಈ ಎರಡೂ ಯೋಜನೆಗಳಲ್ಲಿ ಒಂದು ಕೋಟಿ ರೂಪಾಯಿಗಳಿಗೆ SCP, 60 ಲಕ್ಷ ರೂ TSP ಆ ರೀತಿಯಾಗಿ ಅನುದಾನವನ್ನು ಕೊಡತಕ್ಕಂಥದ್ದು ಮತ್ತು ಫಲಾನುಭವಿಗಳನ್ನು ಆಯ್ಕೆ ಮಾಡುವುದು ನಮ್ಮ ಹಕ್ಕು. ಆದರೆ ನಮ್ಮ ಹಕ್ಕನ್ನು ಸಂಪೂರ್ಣವಾಗಿ ಮೊಟಕುಗೊಳಿಸಿ, ಬೇರೆ ಬೇರೆ ಪತ್ರಗಳ ಆಧಾರದ ಮೇಲೆ ಕೊಳವೆ ಬಾವಿಗಳನ್ನು ಮಂಜೂರು ಮಾಡಿದ್ದಾರೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳೆ, ಏನು ಇದೆಲ್ಲಾ?

ಶ್ರೀ ಶಿವರಾಜ ಎಸ್. ತಂಗಡಗಿ: ಮಾನ್ಯ ಅಧ್ಯಕ್ಷರೆ, ಮೊದಲು ಅದೇ ರೀತಿ ಇತ್ತು. ಆದರೆ ಇದನ್ನು ಬದಲಾವಣೆ ಮಾಡಿ ತಾಲ್ಲೂಕಿಗೆ ಒಂದು ಸಮಿತಿಯನ್ನು ಮಾಡಿದ್ದೇವೆ, ಆ ಸಮಿತಿಗೆ ವಿಧಾನಸಭಾ ಶಾಸಕರನ್ನೇ ಅಧ್ಯಕ್ಷರನ್ನಾಗಿ ಮಾಡಿದ್ದೇವೆ, ಅದಕ್ಕೆ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳನ್ನು ಸದಸ್ಯರನ್ನಾಗಿ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳನ್ನು Nodal Officer ಎಂದು ಮಾಡಿದ್ದೇವೆ. ಇನ್ನು ಮುಂದೆ ಆ ಸಮಿತಿಯ ತೀರ್ಮಾನದ ಪ್ರಕಾರ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.

ಶ್ರೀ ಆನಂದ ವಿಶ್ವನಾಥ ಮಾಮನಿ: 2014–15ನೇ ಸಾಲಿನ ಫಲಾನುಭವಿ ಆಯ್ಕೆ ಮಾಡುವಲ್ಲಿ ಶಾಸಕರ ಹಕ್ಕನ್ನು ಮೊಟುಕುಗೊಳಿದ್ದಾರೆ. ಅದನ್ನು ಬದಲಾವಣೆ ಮಾಡಿ ಸರಿಪಡಿಸಬೇಕು.

ಅಧ್ಯಕ್ಷರು: ಸಮಿತಿ ಮಾಡಿದ್ದಾರೊ ಇಲ್ಲವೊ?

ಶ್ರೀ ಆನಂದ ವಿಶ್ವನಾಥ ಮಾಮನಿ: ನಮಗೆ ಗೊತ್ತಿಲ್ಲ.

ಶ್ರೀ ಶಿವರಾಜ ಎಸ್. ತಂಗಡಗಿ: ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಕಳುಹಿಸಿದ್ದೇನೆ.

ಅಧ್ಯಕ್ಷರು: ಆ ಸಮಿತಿಯ ತೀರ್ಮಾನ ಏನು ಬರುತ್ತದೆಯೊ ಆ ಪ್ರಕಾರ ಮಾಡಿ.

ಶ್ರೀ ಆನಂದ ವಿಶ್ವನಾಥ ಮಾಮನಿ: 2014–15ರ ಆಯ್ಕೆಯಲ್ಲಿ ಶಾಸಕರ ಹಕ್ಕನ್ನು ಮೊಟುಕುಗೊಳಿಸಲಾಗಿದೆ, ಅವರು ಕಾರ್ಯಕ್ರಮವನ್ನು ರೂಪಿಸಬೇಕು, ಅಷ್ಟೇ ನನ್ನ ವಿನಂತಿ.

ಶ್ರೀ ಶಿವರಾಜ ಎಸ್. ತಂಗಡಗಿ: ಹಿಂದೆ ಪತ್ರದ ಮೂಲಕ ನಾವು ಮಾಡುತ್ತಿದ್ದೆವು, ಈಗ ಎಲ್ಲಾ ಶಾಸಕರು ಹೇಳಿದ ಮೇಲೆ ಸಮಿತಿ ಮಾಡಿದ್ದೇವೆ, ಅದರ ಅಧ್ಯಕ್ಷರಾದ ಶಾಸಕರು, ಏನು ಕೊಡುತ್ತಾರೊ ಅದನ್ನು ಪಟ್ಟಿಯಲ್ಲಿ ಸೇರಿಸಲು ಅವಕಾಶ ಮಾಡಲಾಗಿದೆ.

ವಿಷಯ: ರಾಜ್ಯದಲ್ಲಿ ಕೆ.ಎ.ಎಸ್. ಹುದ್ದೆಗಳು ಖಾಲಿಯಿರುವುದರಿಂದ ಆಡಳಿತಕ್ಕೆ ಉಂಟಾಗುತ್ತಿರುವ ತೊಂದರೆಗಳ ಬಗ್ಗೆ.

ಶ್ರೀ ಜೆ.ಆರ್. ಲೋಬೋ (ಮಂಗಳೂರು ನಗರ): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕೆ.ಎ.ಎಸ್. ಹುದ್ದೆಗಳು ಖಾಲಿಯಿರುವುದರಿಂದ ಆಡಳಿತಕ್ಕೆ ಉಂಟಾಗುತ್ತಿರುವ ತೊಂದರೆಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, 1990 ರಿಂದ 2006ರ ಅವಧಿಯಲ್ಲಿ ಕರ್ನಾಟಕ ಆಡಳಿತ ಸೇವೆ (ಕಿರಿಯ ಶ್ರೇಣಿ) ಹುದ್ದೆಗೆ 90 ಕೆ.ಎ.ಎಸ್ ಅಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.